12

# ಕ್ರಿಸ್ತನ ಮದುಮಗಳು

ನಮಗಾಗಿ ಸಭೆಯನ್ನು ಚಿತ್ರಿಸಲು ಪ್ರೇರೇಪಣೆಯು ವಿವಿಧ ರೂಪಕ ಅಲಂಕಾರಗಳನ್ನು ಉಪಯೋಗಿಸಿದೆ. ಪ್ರತಿಯೊಂದು ರೂಪಕವು ಕೆಲವೊಂದು ವಿಶೇಷ ಲಕ್ಷಣಗಳನ್ನು ಒತ್ತಿ ಹೇಳುತ್ತದೆ. ಸಭೆಯು ಅದರ ಆಡಳಿತೆಯನ್ನು ಒತ್ತಿ ಹೇಳಲು ಸಭೆಯು ರಾಜ್ಯದಂತೆ ತೋರಿಸಲ್ಪಟ್ಟಿದೆ. ದೇಹದಂತೆ ಅವರ ಐಕ್ಯತೆಯು ಒತ್ತಿ ಹೇಳಲ್ಪಟ್ಟಿದೆ. ಈ ಅಧ್ಯಯನ ಗಳಲ್ಲಿ ಸಭೆಯು ಕ್ರಿಸ್ತನ ಮದಲಗಿತ್ತಿಯಾಗಿ ರೂಪಿಸಲ್ಪಟ್ಟದ್ದನ್ನು ನೋಡುತ್ತೇವೆ. ಹಲ ವಾರು ವಾಕ್ಯಗಳು ಈ ತತ್ವವನ್ನು ಬೋಧಿಸುತ್ತವೆ. ಅವುಗಳಲ್ಲಿ ಪ್ರತಿಯೊಂದನ್ನು ನಾವು ನೋಡೋಣ (ನೋಡಿರಿ ಯೋಹಾನ 3:28-30; ಎಫೆಸ 5:22-32; ರೋಮಾಪುರ 7:1-4; 2 ಕೊರಿಂಥ 11:2). ಈ ರೂಪಕದಲ್ಲಿ ಸಭೆಯ ಮೇಲೆ ಕೇಂದ್ರೀಕರಿಸುವಾಗ ವಿವಿಧ ಪಾಠಗಳು ಸ್ಪಷ್ಟವಾಗುವವು.

## ಕ್ರಿಸ್ತನೊಂದಿಗೆ ಮದುವೆಯಾಗುವದರಲ್ಲಿ ಹೆಜ್ಜೆಗಳು

ಸಭೆಯನ್ನು ಒಂದು ರಾಜ್ಯದಂತೆ ಯೋಚಿಸುವಾಗ ರೂಪಕಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಮಾರ್ಪಡಿಸುವಿಕೆಯ ಬಗ್ಗೆ ಆಲೋಚಿಸುವುದು ಸ್ವಾಭಾವಿಕವಾದದ್ದಾಗಿದೆ; ನಾವು ಕ್ರೈಸ್ತರಾಗುವಾಗ ದೇವರ ರಾಜ್ಯದ ಪ್ರಜೆಗಳಾಗುತ್ತೇವೆ. ಸಭೆಯನ್ನು ಕುಟುಂಬದಂತೆ ಯೋಚಿಸುವಾಗ, ನಾವು ಕೂಡಲೇ ನೂತನ ಜನನದ ಬಗ್ಗೆ ಆಲೋಚಿಸುತ್ತೇವೆ. ಅದೇ ರೀತಿಯಲ್ಲಿ ಸಭೆಯನ್ನು ಮದುಮಗಳಂತೆ ಯೋಚಿಸುವಾಗ ಮಾರ್ಪಡುವಿಕೆಯಲ್ಲಿಯ ಹಂತಗಳನ್ನು ನಾವು ಕ್ರಿಸ್ತನೊಂದಿಗೆ ಮದುವೆಯಾಗುವದರ ವಿಧಾನದಂತೆ ಆಲೋಚಿ ಸುತ್ತೇವೆ.

ಅಕ್ಷರಶಃ ಮದುವೆ ಮತ್ತು ಕ್ರಿಸ್ತನೊಂದಿಗೆ ಸಭೆಯ ಮದುವೆ ಇವುಗಳ ಮಧ್ಯದಲ್ಲಿಯ ರೂಪಕವು ಗಮನಾರ್ಹವಾದದ್ದಾಗಿದೆ. ಮಾರ್ಪಾಟಾದವರು ಮೊದಲು ಯೇಸುವಿನಲ್ಲಿ ನಂಬತಕ್ಕದ್ದು. ಆಗ ಅವನು ತನ್ನ ಹಳೇ ಜೀವಿತದಿಂದ ಪಶ್ಚಾತ್ತಾಪದಲ್ಲಿ ಹಿಂದಿರುಗತಕ್ಕದ್ದು. ಆಮೇಲೆ, ಅವನು ಆತನಲ್ಲಿ ವಿಶ್ವಾಸವನ್ನು ಅರಿಕೆ ಮಾಡತಕ್ಕದ್ದು. ಅನಂತರ ತಂದೆ, ಕುಮಾರನ, ಪರಿಶುದ್ಧಾತ್ಮನ ಹೆಸರಿನೊಂದಿಗೆ ಬಾಪ್ತಿಸ್ಮ ಕಾರ್ಯವು ಬರುವುದು. ಒಬ್ಬ ಪುರುಷನು ಒಬ್ಬ ಸ್ತ್ರೀಯೊಂದಿಗೆ ಒಂದಾಗುವ ಆಚರಣೆಗೆ ಬಾಪ್ತಿಸ್ಮವು ಹೋಲಿಸಲ್ಪಡಬಹುದು. ಕರ್ತನೊಂದಿಗೆ ನೂತನ ಕ್ರೈಸ್ತನ "ಮದುವೆಯು" ಬಾಪ್ತಿಸ್ಮ ವಾಗುವವರೆಗೆ ಪೂರ್ತಿಯಾಗುವದಿಲ್ಲ (ಮಾರ್ಕ 16:16). ಇಬ್ಬರನ್ನು ಮದುವೆಯಲ್ಲಿ ವಿಶ್ವಾಸವು ಮಾತ್ರವೇ ಒಂದುಗೂಡಿಸುವದಿಲ್ಲ. ಒಂದು ಅರಿಕೆಯು ಮದುವೆಯನ್ನು ಪೂರ್ತಿಗೊಳಿಸುವದಿಲ್ಲ; ಆಚರಣೆಯು ನಡಿಸಲ್ಪಡತಕ್ಕದ್ದು.

## ಬೇರೆ ಸಂಗಾತಿಯಿಲ್ಲ

ಎರಡನೆಯ ಸತ್ಯವು ರೋಮಾಪುರ 7:1-6ರಲ್ಲಿ ಬೋಧಿಸಲ್ಪಟ್ಟಿದೆ. ಆದುದರಿಂದ ಮಾರ್ಪಾಟಾಗುವವನು ಕ್ರಿಸ್ತನೊಂದಿಗೆ ಮದುವೆಯಾಗುವ ಮೊದಲು ತನ್ನ ಮೊದಲಿನ ಸಂಗಾತಿಯನ್ನು ಕಳೆದುಕೊಳ್ಳುವ ಅಗತ್ಯತೆಯಿರುವದೆಂದು ಒತ್ತಿ ಹೇಳುತ್ತಾನೆ. ಹಿಂದಿನ ಸಂಗಾತಿ ಮೋಶೆಯ ಧರ್ಮಶಾಸ್ತ್ರವೆಂದು ಅವನು ಈ ವಾಕ್ಯದಲ್ಲಿ ಸ್ಪಷ್ಟಪಡಿಸಿದ್ದಾನೆ. ಕ್ರಿಸ್ತನ ಮರಣವು ಅದರಿಂದ ನಮ್ಮನ್ನು ಬಿಡುಗಡೆ ಮಾಡಿತು. ಈಗ ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ಕ್ರಿಸ್ತನೊಂದಿಗೆ ಮದುವೆ ಯಾಗುವ ಸಾಧ್ಯತೆಯಿರುವುದು. ಗಲಾತ್ಯ 3:23, 24; ಕೊಲೊಸ್ಸೆ 2:14 ಮತ್ತು ಇಬ್ರಿಯ 10:9, 10 ಒಳಗೊಂಡು ಇತರ ವಾಕ್ಯಗಳಲ್ಲಿಯೂ ಸಹ ಈ ಸಂಗತಿಯು ಒತ್ತಿ ಹೇಳಲಾಗಿದೆ. ಮೋಶೆಯ ಧರ್ಮಶಾಸ್ತ್ರಕ್ಕೆ ಮತ್ತು ಸುವಾರ್ತೆಗೆ ಒಂದೇ ಸಮಯದಲ್ಲಿ ಅಂಟಿ ಕೊಳ್ಳಲು ಪ್ರಯತ್ನಿಸುವವರು ಆತ್ಮಿಕ ವ್ಯಭಿಚಾರದ ಅಪರಾಧಿಗಳಾಗಿದ್ದಾರೆ.

## ಕ್ರಿಸ್ತನಿಗೆ ಒಂದೇ ಸಭೆಯಿದೆ

ಈ ರೂಪಕದಿಂದ ಒತ್ತಿ ಹೇಳಲ್ಪಟ್ಟ ಮೂರನೆಯ ಪಾಠವು ಕ್ರಿಸ್ತನಿಗೆ ಒಂದೇ ಸಭೆಯಿರುವುದು ಎಂಬುದು. ನನ್ನ ಅಭಿಪ್ರಾಯದಲ್ಲಿ ಒಂದು ಸಭೆಯಿರಬೇಕಾಗಿತ್ತು ಎಂದು ನಾನು ಹೇಳಲಿಲ್ಲ; ಇಲ್ಲವೇ ಒಂದು ಗುಂಪು ಕೂಟವಾಗಿ ಕೂಡಿ ಬಂದು ಒಂದು ಸಭೆಯಿರುವುದು ಚೆನ್ನಾಗಿರುವದೆಂದು ತೀರ್ಮಾನಿಸಬೇಕೆಂದೂ ನಾನು ಹೇಳಲಿಲ್ಲ. ಕ್ರಿಸ್ತನಿಗೆ ಒಂದೇ ಒಂದು ಸಭೆಯಿರುವುದೆಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ. ಮತ್ತಾಯ 16:18 ಹಾಗೂ ಎಫೇಸ 5:25 ರಂಥ ವಾಕ್ಯಗಳಲ್ಲಿ ಇದು ಒತ್ತಿ ಹೇಳಲ್ಪಟ್ಟಿದೆ. ಇವುಗಳಲ್ಲಿ "ಸಭೆ" ಎಂಬ ಏಕವಚನವು ಉಪಯೋಗಿಸಲ್ಪಟ್ಟಿದೆ. ವಿವಿಧ ರೂಪಕಗಳೂ ಸಹ ಈ ಸಂಗತಿಯನ್ನು ಉದಾಹರಿಸುತ್ತವೆ. ಕ್ರಿಸ್ತನಿಗೆ ಕೇವಲ ಒಂದೇ ಸಭೆಯು ಇರುವುದು ಎಂಬ ಸಂಗತಿಯನ್ನು ಸ್ವಾಭಾವಿಕವಾಗಿ ಒತ್ತಿ ಹೇಳುವ ರೂಪಕಗಳನ್ನು ಹೊಸ ಒಡಂಬಡಿಕೆಯು ಉಪಯೋಗಿಸುತ್ತದೆ. ಸಭೆಯನ್ನು ಕ್ರಿಸ್ತನ ಮದಲಗಿತ್ತಿಯಂತೆ ಈಗ ನಾವು ಯೋಚಿಸುತ್ತಿರುವದಕ್ಕಿಂತ ಹೆಚ್ಚು ಬಲವಾದದ್ದು ಬೇರೆ ಯಾವುದೂ ಇರುವದಿಲ್ಲ. ಕ್ರಿಸ್ತನು ಬಹು ಪತ್ನಿತ್ವವನ್ನು ಖಂಡಿಸಿದನು. ಆತನು ಒಂದನ್ನು ಪ್ರಸಂಗಿಸಿ ಇನ್ನೊಂದನ್ನು ರೂಢಿಸಿದನೋ? ಆತನಿಗೆ ಬಹಳ ಪತ್ನಿಯರಿರುವರೋ?

## ಸಭೆಯ ಶುದ್ಧತೆ

ರೂಪಕದಿಂದ ಒತ್ತಿಹೇಳಲ್ಪಟ್ಟ ಪ್ರಾಥಮಿಕ ಪಾಠಕ್ಕೆ ನಾವೀಗ ಬರುತ್ತೇವೆ: ಅದು ಸಭೆಯ ಶುದ್ಧತೆಯಾಗಿದೆ. ಸಭೆಯನ್ನು ಆತನ ಮದಲಗಿತ್ತಿಯಂತೆ ಚಿತ್ರಿಸವುದು ಕ್ರಿಸ್ತನಿಗೆ ತನ್ನ ಸಭೆಗಿರುವ ಉನ್ನತ ಗೌರವವನ್ನು ತೋರಿಸುತ್ತದೆ. ಆತನು ಅದನ್ನು ಶುದ್ಧೀಕರಿಸಿದ್ದಾನೆ ಮತ್ತು ಪರಿಶುದ್ಧ ಮಾಡಿದ್ದಾನೆ. ತನ್ನ ಮದಲಗಿತ್ತಿಯ ಮೇಲೆ ಆತನು ಹೆಮ್ಮೆಯುಳ್ಳವನಾಗಿದ್ದಾನೆ. ಕಳಂಕಸುಕ್ಕು ಒಂದೂ ಇಲ್ಲದ ಮಹಿಮೆಯುಳ್ಳ ಕನ್ನಿಕೆಯೋ ಎಂಬಂತೆ ಆಕೆಯನ್ನು ತನಗೆ ಒಪ್ಪಿಸಿಕೊಳ್ಳುಲು ಆತನು ಬಯಸುತ್ತಾನೆ. ಶುದ್ಧ ಜೀವಿಸದವರನ್ನು ಸ್ವೀಕರಿಸಲು ಕ್ರಿಸ್ತನು ಬರಲಿಕ್ಕಿದ್ದಾನೆ. ಆತನ ಮದಲಗಿತ್ತಿಯು ಅಶುದ್ಧರಾದ, ಅಪವಿತ್ರರಾದ ಜನರಿಂದ ಕೂಡಿದ್ದಾಗಿರುವದಿಲ್ಲ. ಕ್ರಿಸ್ತನು ಪುನಃ ಬರುವಾಗ ತನ್ನನ್ನು ತನ್ನವನನ್ನಾಗಿ ಮಾಡಿಕೊಳ್ಳಲು ಸಂತೋಷಪಡಲ್ಲಿಕ್ಕಾಗುವಂತೆ ಸಭೆಯ ಪ್ರತಿಯೊಬ್ಬ ಸದಸ್ಯನು ಹೊಸದಾಗಿ ತೀರ್ಮಾನಿಸಿಕೊಳ್ಳಲು ಈ ಸತ್ಯವು

ಕಾರಣವಾಗತಕ್ಕದ್ದು (ಎಫೆಸ 5:23-35).

## ಮುಕ್ತಾಯ

ಸಭೆಯೆಂದು ತಿಳಿಯಲ್ಪಡುವ ಸುಂದರವಾದ ಮತ್ತು ಮಹತ್ವವುಳ್ಳ ಸಜೀವವಾದದ್ದು ಕ್ರಿಸ್ತನ ಮದುಮಗಳು. ಸಭೆಯ ಮಹತ್ವದಲ್ಲಿ ಅಮೂಲ್ಯವಾದ ಪರಿಜ್ಞಾನವನ್ನು ನಮಗೆ ಕೊಡಲು ಪವಿತ್ರಾತ್ಮನಿಂದ ಉಪಯೋಗಿಸಲ್ಪಟ್ಟ ಈ ದೃಷ್ಟಾಂತವನ್ನು ಒಪ್ಪಿಕೊಳ್ಳೋಣವೋ.

© 2009 Truth for Today